**OS. 67/2016**
**-PW-2**

**ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಐ ಆರ್ ಎಸ್ ವಕೀಲರಿಂದ**

1. ನಾನು ಪಿರಿಯಾಪಟ್ಟಣ ಪೇಟೆಯಲ್ಲಿ ವಾಸವಾಗಿದ್ದೇನೆ. ನಿಪಿ-1 ದಾಖಲೆಗೆ ಸಾಕ್ಷಿಯಾಗಿ ಬರುವಂತೆ 1 ನೇ ಪ್ರತಿವಾದಿ ಕರೆದಿರುತ್ತಾರೆ. 2 ನೇ ಪ್ರತಿವಾದಿ ಯ ಮೂಲಕ ನನಗೆ 1 ನೇ ಪ್ರತಿವಾದಿಯ ಪರಿಚಯ ಇದೆ. ನಾನು ವಸಂತಕುಮಾರ್ ರವರ ಕಚೇರಿಯಲ್ಲಿ ಕೆಲಸ ಮಾಡುತ್ತಿರಲಿಲ್ಲ. ಅವರು ತಯಾರಿಸಿ ನೀಡಿರುವ ದಾಖಲೆಗಳನ್ನು ನಾನು ಉಪನೊಂದಣಾಧಿಕಾರಿಯವರ ಕಚೇರಿಗೆ ತೆಗೆದುಕೊಂಡು ಹೋಗಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

2. ನಿಪಿ-1 ದಾಖಲೆಗೆ ವಸಂತಕುಮಾರ್ ರವರ ಕಚೇರಿಯಲ್ಲಿ ಮತ್ತು ಉಪನೊಂದಣಾಧಿಕಾರಿಯವರ ಕಚೇರಿಯಲ್ಲಿ ಸಹಿ ಮಾಡಿರುತ್ತೇನೆ. ನಿಪಿ-1 ದಾಖಲೆಯನ್ನು ವಾದಿ ಮತ್ತು ಪ್ರತಿವಾದಿಯರು ಮಾಡಿಕೊಂಡಿರುತ್ತಾರೆ.

3. ವಾದಿಯ ಪರಿಚಯವಿರುವುದಿಲ್ಲ. ನಿಪಿ-1 ದಾಖಲೆಗೆ ಸಂಬಂಧ ಪಟ್ಟು ವ್ಯವಹಾರದ ಮಾತುಕತೆ, ಎಲ್ಲಿ ಆಗಿದೆ ಮತ್ತು ಎಷ್ಟು ಹಣಕ್ಕೆ ಮಾತುಕತೆ ಆಗಿದೆ ಮತ್ತು ಯಾವ ಮನೆಯಲ್ಲಿ ಮಾತುಕತೆ ಆಗಿದೆ ಎಂದು ನನಗೆ ಖುದ್ದು ಮಾಹಿತಿ ಇದೆ. ನಿಪಿ-1 ಆಸ್ತಿಯ ಮಾತುಕತೆಯು ವಸಂತಕುಮಾರ್ ರವರ ಕಚೇರಿಯಲ್ಲಿ ಆಗಿರುತ್ತದೆ. ಮಾತುಕತೆ ಆದಾಗ ರೂ. 325000/- ಹಣವನ್ನು ಮುಂಗಡ ನೀಡಿರುತ್ತಾರೆ. ಸದರಿ ಹಣವನ್ನು ವಸಂತಕುಮಾರ್ ರವರ ಕಚೇರಿಯಲ್ಲಿ ಚೆಕ್ ಮುಖಾಂತರ ನೀಡಿರುತ್ತಾರೆ. ಕ್ರಯ ಸಾಧನವನ್ನು ಬರೆದುಕೊಡಲು ನಿಪಿ-1 ರಲ್ಲಿ ಒಂದು ವರುಷದ ಅವಧಿ ನೀಡಿರುತ್ತಾರೆ. ವ್ಯವಹಾರದ ಮಾತುಕತೆ ಯಾಗುವಾಗ ವಾರಿಜಾ, ಸೋಮಯ್ಯು, ರವಿ, ಶೈಲಜಾ, ಚೆನ್ನಾಜಮ್ಮ ಮತ್ತು ಸಾಕ್ಷಿದಾರರಾದ ಸುರೇಶ್ ರವರು ಇದ್ದರು.

4. ದಿಃ 03.05.2012 ರಂದು ನಿಪಿ-1 ದಾಖಲೆಯನ್ನು ಬರೆಯಲಾಗಿದೆ. ಸದರಿ ದಾಖಲೆಯನ್ನು ದಿಃ 07.05.2012 ರಂದು ನೊಂದಣಿ ಮಾಡಿಸಲಾಗಿದೆ. ದಿಃ 07.05.2012 ರಂದು ಉಪನೊಂದಣಾಧಿಕಾರಿಯವರ ಕಚೇರಿಯಲ್ಲಿ ನಿಪಿ-1 ದಾಖಲೆಗೆ ಸಹಿ ಮಾಡಿರುತ್ತೇನೆ. 1 ಮತ್ತು 2 ನೇ ಪ್ರತಿವಾದಿ ಮತ್ತು ಅವರ ಕುಟುಂಬದವರು ನನಗೆ ಪರಿಚಯವಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ದಾಖಲೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ವಸಂತ್ ಕುವಾರ್ ರವರ ಕಚೇರಿಯ ವ್ಯವಹಾರದ ಬಗ್ಗೆ ಮಾತುಕತೆ ಆಗಿದೆ, ಅವರ ಕಚೇರಿಯಲ್ಲಿ ಮುಂಗಡ ಹಣ ನೀಡಲಾಗಿದೆ ಹಾಗೂ ಅದೇ ದಿನ ನಿಪಿ-1 ದಾಖಲೆಯನ್ನು ತಯಾರಿಸಲಾಗಿದೆ ಎಂದು ನಾನು ಹೇಳಿರುವುದೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ನನಗೆ ನಿಪಿ-1 ದಾಖಲೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಕೂಡ ವಸಂತಕುಮಾರ್ ರವರ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ ಅವರು ಹೇಳಿದ ಪ್ರಕಾರ ನಿಪಿ-1 ದಾಖಲೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ಕೂಡ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

1 ನೇ **ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
ಪಿರಿಯಾಪಟ್ಟಣ.